**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ - 6681/2021**
**ಚಾಸಾ - 03 / ಪ್ರಾಸಾ - 02**

| | |
|---|---|
| ಹೆಸರು | **ಮೃತ್ಯುಂಜಯಪ್ಪ** |
| ತಂದೆಯ ಹೆಸರು | **ಚಿಕ್ಕ ಗಂಗಪ್ಪ** |
| ವಯಸ್ಸು | **90** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಪೆಮ್ಮನಹಳ್ಳಿ** |

**ದಿನಾಂಕಃ 11-07-2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಪ್ರಾಸಾ-1 ಮತ್ತು ಚಾಸಾ-2 ರವರು ನನ್ನ ಮಕ್ಕಳು. ಆರೋಪಿಗಳು ನನ್ನ ತಮ್ಮನ ಮಕ್ಕಳು. ಪ್ರಾಸಾ-1 ಮತ್ತು ಚಾಸಾ-2 ರವರು ಅವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಲೋನ್ ನ್ನು ತೆಗೆದುಕೊಳ್ಳುತ್ತೇನೆ ಎಂದು ನನ್ನಿಂದ ಜಮೀನನ್ನು ಬರೆಸಿಕೊಂಡರು. ಆರೋಪಿಗಳು ಮತ್ತು ಪ್ರಾಸಾ-1 ಮತ್ತು ಚಾಸಾ-2 ರವರು ಸೇರಿಕೊಂಡು ರೋಡ್ ನ್ನು ಮಾಡಿಕೊಂಡರು. ನಾನು ಯಾವ ಕಾರಣಕ್ಕಾಗಿ ರೋಡ್ ನ್ನು ಮಾಡಿದ್ದೀರಾ ಎಂದು ಕೇಳಿದಾಗ ನಿನ್ನ ಹೆಸರಿನಲ್ಲಿ ಜಮೀನು ಇದ್ದರೆ ತೇಗದ ಮರ ಕಡಿಯ ಬಾರದು ಎಂದು ಅರಣ್ಯ ಇಲಾಖೆಗೆ ದೂರನ್ನು ನೀಡಲು ಹೇಳಿದರು. ಆದರೆ ಜಮೀನು ನನ್ನ ಹೆಸರಿನಲ್ಲಿ ಇಲ್ಲದೇ ಇದ್ದ ಕಾರಣ ನಾನು ದೂರನ್ನು ಕೊಡಲಿಲ್ಲ. ಈಗ ಜಮೀನನ್ನು ಎ. ಸಿ ನ್ಯಾಯಾಲಯದಿಂದ ನನ್ನ ಹೆಸರಿಗೆ ಮಾಡಿಕೊಂಡಿದ್ದೇನೆ.

ಈಗ ಸಾಕ್ಷಿಗೆ ನಿಪಿ-8 ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-8(ಬಿ) ಎಂದು

ಗುರುತಿಸಲಾಯಿತು. ಈಗ ಸಾಕ್ಷಿಗೆ ನಿಪಿ-2 ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಾನು ನಿಪಿ-8 ಮತ್ತು 2 ಕ್ಕೆ ನನ್ನ ಸಹಿಯನ್ನು ಎಲ್ಲಿ ಹಾಕಿದ್ದೇನೆ ಎಂದು ನನಗೆ ಗೊತ್ತಿಲ್ಲ. ನನ್ನ ಜೊತೆ ನಿಪಿ-8 ಮತ್ತು 2 ಕ್ಕೆ ಯಾರು ಸಹಿಯನ್ನು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನಗೆ ನಿಪಿ-8 ಮತ್ತು 2 ರಲ್ಲಿ ಇರುವ ವಿಷಯದ ಬಗ್ಗೆ ಮಾಹಿತಿ ಇಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರಿಗೆ ನನ್ನ ಹೇಳಿಕೆಯನ್ನು ನೀಡಿರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ನೀವು ನಿಮ್ಮ ಮಗಳಾದ ವಿಮಲರವರಿಗೆ ಪೆಮ್ಮನಹಳ್ಳಿ ಗ್ರಾಮದ ಸರ್ವೆ ನಂಬರ್ 43/2 ರಲ್ಲಿ 1 ಎಕರೆ 22 ಗುಂಟೆ ಜಮೀನು ಮತ್ತು ನಿಮ್ಮ ಮಗಳಾದ ಪ್ರಾಸಾ-1 ರವರಿಗೆ ಅದೇ ಗ್ರಾಮದ ಸರ್ವೆ ನಂ.38/1 ರಲ್ಲಿ 33 ಗುಂಟೆ ಜಮೀನನ್ನು ನೀಡಿರುತ್ತಿರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ಅವರ ಮಕ್ಕಳು ಅವರಿಗೆ ಗೊತ್ತಿಲ್ಲದ ಹಾಗೆ ಜಮೀನನ್ನು ಬರೆಸಿಕೊಂಡಿದ್ದಾರೆ ಎಂದು ನುಡಿದಿರುತ್ತಾರೆ. ಸದರಿ ಜಮೀನುಗಳು ಅಕ್ಕಪಕ್ಕದಲ್ಲಿ ಇವೆ ಮತ್ತು ನಿಮ್ಮ ಮಕ್ಕಳು ಇಬ್ಬರು ಅವರವರ ಹೆಸರಿಗೆ ಕಂದಾಯದಾಖಲೆಗಳನ್ನು ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಮ್ಮ ಇಬ್ಬರು ಮಕ್ಕಳು ಸದರಿ ಜಮೀನಿನಲ್ಲಿ ಸ್ವಲ್ಪ ಭಾಗ ತೇಗ ಮತ್ತು ಸಿಲ್ವರ್ ಮರಗಳನ್ನು ಹಾಕಿರುತ್ತಾರೆ ಎಂದರೆ ಸಾಕ್ಷಿಯು ತಾನು ಸದರಿ ಮರಗಳನ್ನು ಹಾಕಿರುತ್ತೇನೆ ಮತ್ತು ತನ್ನ ಮಕ್ಕಳೇ ಸದರಿ ಮರಗಳನ್ನು ಕಡಿದಿದ್ದಾರೆ

ಎನ್ನುತ್ತಾರೆ. ಸದರಿ ಮರಗಳು ಸುಮಾರು 10 ರಿಂದ 12 ವರ್ಷದ ಮರಳಾಗಿರುತ್ತದೆ ಮತುತ ನಿಮ್ಮ ಜಮೀನಿನ ಹಿಂಭಾಗದಲ್ಲಿ ನಿಮ್ಮ ತಮ್ಮನಾದ ಬಸಣ್ಣನವರ ಜಮೀನು ಇದ್ದು ಅವರು ಓಡಾಡಲು ಪಕ್ಕದಲ್ಲಿ ದಾರಿ ಸಹ ಇರುತ್ತದೆ ಆದರೂ ಸಹ ಅವರು ನೇರವಾಗಿ ದಾರಿ ಬಿಡುವಂತೆ ಗಲಾಟೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ದಿ.10-10-2021 ರಂದು ನಿಮ್ಮ ಮಕ್ಕಳ ಜಮೀನಿನಲ್ಲಿ ಇರುವ ತೇಗದ ಮರವನ್ನು ಕಡಿಯುತ್ತಿದ್ದಾರೆ ಎಂದು ತಿಳಿದು ನೀವು, ಪ್ರಾಸಾ-1 ಮತ್ತು ಚಾಸಾ-2 ರವರು ಬೆಳಗ್ಗೆ 11 ಗಂಟೆ ಸಮಯದಲ್ಲಿ ಜಮೀನಿನ ಬ ಳಿ ಹೋಗಿ ನೋಡಿದಾಗ ಆರೋಪಿಗಳು ಜಮೀನಿಗೆ ಅತಿಕ್ರಮ ಪ್ರವೇಶವನ್ನು ಮಾಡಿ ಸುಮಾರು 75 ತೇಗದ ಮರಗಳನ್ನು ಕಡಿದು ನೇರವಾಗಿ ಸುಮಾರು 15 ಅಡಿ ಅಗಲದ ರಸ್ತೆಯನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಆರೋಪಿಗಳ ಬಳಿ ಕೇಳಲು ಹೋದಾಗ ಅವರು ನಿಮ್ಮ ಜೊತೆ ಗಲಾಟೆಯನ್ನು ಮಾಡಿ ಕೈಗಳಿಂದ ನಿಮಗೆ ಹೊಡೆದು ನೋವುಂಟು ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಕೃತ್ಯದಿಂದ ಸುಮಾರು 2 ಲಕ್ಷಕ್ಕೊ ಅಧಿಕ ನಷ್ಟ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ನಿಪಿ-2 ರಂತೆ ದಿ.11-10-2021 ರಂದು ಮಧ್ಯಾಹ್ನ 3 ರಿಂದ 4 ಗಂಟೆ ಸಮಯದಲ್ಲಿ ಪೋಲೀಸರು ಕೃತ್ಯನಡೆದ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-2 ಕ್ಕೆ ನಿಮ್ಮ ಜೊತೆಯಲ್ಲಿ ಪ್ರಾಸಾ-1, ಚಾಸಾ-2 ಮತ್ತು 4 ರವರು ಸಹಿಯನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಈಗ ಸಾಕ್ಷಿಗೆ ನಿಪಿ-3 ರಿಂದ 7 ನ್ನು ತೋರಿಸಿದ್ದು, ಅದನ್ನು ಪಂಚನಾಮೆ ಮಾಡುವ ಸಮಯದಲ್ಲಿ ತೆಗೆಯಲಾಗಿದೆ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ-2 ರಲ್ಲಿ ಇರುವ ವಿಷಯವನ್ನು ಓದಿ ತಿಳಿಸಿದ ನಂತರ ನೀವು ಸಹಿಯನ್ನು ಮಾಡಿರುತ್ತೀರಾ ಎಂದರೆ

ಸಾಕ್ಷಿಯು ಹೌದು ಎನ್ನುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿ.13-10-2021 ರಂದು ನೀವು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಕೃತ್ಯವು ನಡೆದು ಸುಮಾರು 3 ವರ್ಷ ಆಗಿರುವ ಕಾರಣದಿಂದ ನೀವು ಈ ಮೇಲೆ ಹೇಳಿರುವ ವಿಷಯವನ್ನು ಮರೆತಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿಗಳೇ ನಿಮ್ಮ ಜಮೀನಿಗೆ ಅತಿಕ್ರಮ ಪ್ರವೇಶವನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಗಳಪರ ಶ್ರೀ. ಎಂ. ಎನ್ , ವಕೀಲರಿಂದಃ-**

1. ನಾನು ಸ್ಥಳಕ್ಕೆ ಹೋದ ಸಮಯದಲ್ಲಿ ಮರವನ್ನು ಇನ್ನೂ ಕಡಿಯುತ್ತಿದ್ದರು ಮತ್ತು ಅಲ್ಲಿ ಜೆ. ಸಿ ಬಿ ಇತ್ತು. ನನಗೆ ಸದರಿ ಜೆ. ಸಿ ಬಿ ಯ ಸಂಖ್ಯೆ ಮತ್ತು ಚಾಲಕನ ಬಗ್ಗೆ ಗೊತ್ತಿರುವುದಿಲ್ಲ . ಸಾಕ್ಷಿಯು ಮುಂದುವರೆದು ಆ ಸಮಯದಲ್ಲಿ ಸುಮಾರು 60 ರಿಂದ 70 ಜನರು ಇದ್ದರು ಎಂದು ನುಡಿದಿರುತ್ತಾರೆ. ಸದರಿ 60 ರಿಂದ 70 ಜನರು ನಮ್ಮ ಊರಿನವರು ಅಲ್ಲ ಮತ್ತು ಅವರ ಹೆಸರು ಮತ್ತು ವಿಳಾಸ ನನಗೆ ಗೊತ್ತಿರುವುದಿಲ್ಲ. ಸದರಿ 60 ರಿಂದ 70 ಜನರು ಗರಗಸದಿಂದ ಮರಗಳನ್ನು ಕತ್ತರಿಸುತ್ತಿದ್ದರು. ಯಾವ ಯಾವ ಸರ್ವೆ ನಂಬರ್ ನಲ್ಲಿ ಎಷ್ಟು ಮರಗಳನ್ನು ಕತ್ತರಿಸಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಯಾವುದೇ ಸಿಲ್ವರ್ ಮರವನ್ನು ಕಡಿದಿರುವುದಿಲ್ಲ ಮತ್ತು ಎಲ್ಲಾ ಮರವು ತೇಗದ ಮರಗಳು ಆಗಿರುತ್ತದೆ.

2. ಆರೋಪಿಗಳು ನನಗೆ ಹೊಡೆದಿರುವ ವಿಷಯಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ಚಿಕಿತ್ಸೆಯನ್ನು ಪಡೆದುಕೊಂಡಿರುವುದಿಲ್ಲ. ಪೋಲೀಸರು ಯಾವ ದಿನಾಂಕ ಮತ್ತು ಸಮಯದಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಬಂದಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ನನಗೆ ನಿಪಿ-2 ಮತ್ತು 8 ರಲ್ಲಿ ಇರುವ ವಿಷಯದ

ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

3. ಓ. ಎಸ್ ಸಂ. 233/1996 ರಂತೆ ನಿಮ್ಮ ತಮ್ಮನ ಹೆಂಡತಿಯಾದ ಸಿದ್ಧಗಂಗಮ್ಮನವರು ನಿಮ್ಮ ವಿರುದ್ದ ದಾವೆಯ ವಿಷಯಕ್ಕೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ದಾವೆಯಲ್ಲಿ ಸರ್ವೆ ನಂ.43/2 ಮತ್ತು ಸರ್ವೆ ನಂ.38/1 ರ ನಡುವೆ 15 ಅಡಿ ಅಗಲದ ಜಾಗವನ್ನು ದಾರಿಯನ್ನಾಗಿ ಮಾಡಲಾಗಿರುತ್ತದೆ ಮತುತ ಅದರಂತೆ ರಾಜಿಯಾಗಿರುತ್ತದೆ ಮತ್ತು ನೀವು ಸಹ ರಾಜಿ ಅರ್ಜಿಗೆ ಸಹಿಯನ್ನು ಹಾಕಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿ.22-01-2010 ರಂದು ಸದರಿ ದಾವೆಯು ರಾಜಿ ಮುಖಾಂತರ ಇತ್ಯರ್ಥ ಗೊಂಡಿರುತ್ತದೆ ಎಂದರೆ ಸಾಕ್ಷಿಯು ಇರುಬಹುದು ಎನ್ನುತ್ತಾರೆ. ಸದರಿ ದಾರಿಯಲ್ಲಿ ಯಾವುದೇ ಮರಗಳು ಇರಲಿಲ್ಲ ಎಂದರೆ ಸಾಕ್ಷಿಯು ಸದರಿ ದಾರಿಯಲ್ಲಿಯೇ ಮರಗಳು ಇತ್ತು ಮತ್ತು ಅದನ್ನು ಕಡಿದು ಹಾಕಿರುತ್ತಾರೆ ಎನ್ನುತ್ತಾರೆ. ಸದರಿ ದಾವೆಯಲ್ಲಿ ನೀವು ಮತ್ತು ಆರೋಪಿಗಳು ಇಬ್ಬರೂ ಸಹ ದಾರಿಯನ್ನು ಉಪಯೋಗಿಸಬೇಕು ಎಂದು ಹೇಳಿ ದಾವೆಯನ್ನು ರಾಜಿ ಮಾಡಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

4. ಸರ್ವೆ ನಂ.43/2 ಮತ್ತು 38/1 ರ ಸ್ವತ್ತಿಗೆ ಫ್ರಾಸಾ-1 ಮತ್ತು ಚಾಸಾ-2 ರವರು ಮಾಲೀಕರಾಗಿರುವುದಿಲ್ಲ ಮತ್ತು ಅವರು ಸ್ವಾಧೀನದಲಿಯೂ ಸಹ ಇರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಸದರಿ ಜಮೀನಿಗೆ ಸಂಬಂಧಿಸಿದಂತೆ ಫ್ರಾಸಾ-1 ಮತ್ತು ಚಾಸಾ-2 ರವರು ನಿಮಗೆ ತಿಳಿಯದ ಹಾಗೆ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 1996 ನೇ ಇಸವಿಯಿಂದಲೂ ನಿಮಗೂ ಮತ್ತು ಆರೋಪಿಗಳ ನಡುವೆ ಜಮೀನಿನ ವಿಷಯಕ್ಕೆ ಸಂಬಂಧಿಸಿದಂತೆ ಮಾತುಕತೆ ಇರುವುದಿಲ್ಲ

ಎಂದರೆ ಸಾಕ್ಷಿಯು ಅದಕ್ಕೂ ಮೊದಲಿನಿಂದಲೂ ಮಾತುಕತೆ ಇರುವುದಿಲ್ಲ ಎನ್ನುತ್ತಾರೆ. ಈ ಮೇಲೆ ಹೇಳಿರುವ ಸರ್ವೆ ನಂಬರ್ ಗಳಲ್ಲಿ ಮರಗಳು ಇರಲಿಲ್ಲ ಮತ್ತು ಅವುಗಳನ್ನು ಆರೋಪಿಗಳು ಕತ್ತರಿಸಲಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಮಗೂ ಮತ್ತು ಆರೋಪಿಗಳಿಗೂ ಯಾವುದೇ ಮಾತುಕತೆ ಇಲ್ಲದೇ ಇರುವ ಕಾರಣ ಅವರು ಮರಗಳನ್ನು ಕಡಿದು ಹಾಕದೇ ಇದ್ದರೂ, ದಾರಿ ಮಾಡದೇ ಇದ್ದರೂ ಮತ್ತು ನಿಮಗೆ ಹೊಡೆಯದೇ ಇದ್ದರೂ ಸಹ ಆರೋಪಿಗಳಿಗೆ ತೊಂದರೆಯನ್ನು ಕೊಡುವ ಉದ್ದೇಶದಿಂದ ನೀವು ಅವರ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -**
**ಚಾಸಾ - 01 / ಪ್ರಾಸಾ - 01**

| | |
|---|---|
| ಹೆಸರು | |
| ತಂದೆಯ / ಗಂಡನ ಹೆಸರು | |
| ವಯಸ್ಸು | |
| ಉದ್ಯೋಗ | ವ್ಯವಸಾಯ |
| ವಿಳಾಸ | |

ದಿನಾಂಕಃ **07-03-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ - ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ -**

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

**ಪಾಟೀ ಸವಾಲು - ಆರೋಪಿ** ಪರ **ಶ್ರೀ.** ವಕೀಲರಿಂದ ಃ-

ಆರೋಪಿಗಳ ಪರವಾಗಿ ಏನು ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

**ಮರು ವಿಚಾರಣೆ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**